ದಿನಾಂಕ **25.05.2022** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಪಾಟೀ ಸವಾಲುಃ** 2 ನೇ ಪ್ರತಿವಾದಿ ಪರ ವಕೀಲರಾದ **ವಿ.ಎಂ.ಎನ್.ಪಿ** ರವರಿಂದಃ

ನಾನು ವಾದಿ ಸಂಸ್ಥೆ ಕಾರ್ಯದರ್ಶಿ ಎಂದು ತೋರಿಸಲು ಯಾವುದೇ ಅದಿಕೃತವಾದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ವಾದಿ ಸಂಸ್ಥೆ ಪರವಾಗಿ ಸಾಕ್ಷ್ಯ ನುಡಿಯಲು ಅದಿಕೃತವಾದ ಯಾವುದೇ ಪರವಾನಿಗೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸಂಸ್ಥೆ ನೋಂದಣಿ ಆಗಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ವಿಸ್ತೀರ್ಣ ಉತ್ತರ -ದಕ್ಷಿಣ 233 ಅಡಿ, ಪೂರ್ವ- ಪಶ್ಚಿಮ 239 ಅಡಿ ಇರುತ್ತದೆ. ದಾವಾ ಆಸ್ತಿಯನ್ನು ಪುರಸಭೆಯವರು ವಾದಿ ಸಂಸ್ಥೆಗೆ ಮಂಜೂರು ಮಾಡಿರುತ್ತಾರೆ. ಸದರಿ ಮಂಜೂರು ಆದ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಶ್ಚಿಮಕ್ಕೆ ರಸ್ತೆ, ಪೂರ್ವಕ್ಕೆ ಮಹದೇವಪ್ಪನವರ ಮನೆ ಮತ್ತು ರಸ್ತೆ ಇರುತ್ತದೆ. ಉತ್ತರಕ್ಕೆ ಖಾಸಗಿ ನಿವೇಶನಗಳು ಮತ್ತು ಮನೆ, ದಕ್ಷಿಣಕ್ಕೆ ಗಲ್ಲಿ ಇರುತ್ತದೆ. ದಾವಾ ಆಸ್ತಿಯ ಚೆಕ್ಕು ಬಂಧಿ ಮೇಲೆ ತಿಳಿಸಿರುವಂತೆ ಇರುತ್ತದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಗೆ ಒಟ್ಟು 6 ಸಂಖ್ಯೆಗಳಿರುತ್ತವೆ. ಸದರಿ ಆಸ್ತಿಯ ಸಂಖ್ಯೆ ಹೇಳಲು ನನಗೆ ನೆನಪಿರುವುದಿಲ್ಲ. 2 ನೇ ಪ್ರತಿವಾದಿಯವರ ನಿವೇಶನದ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ನಾನು ನನ್ನ ವಾದ ಪತ್ರದಲ್ಲಿ ದಾವಾ ಆಸ್ತಿಯ ಖಾತೆ ಸಂಖ್ಯೆ ರಿ-ನಂಬರ್ ಆಗಿರುತ್ತದೆ ಎಂದು ತಿಳಿಸಿದ್ದು, ಅದು ಯಾವ ವರ್ಷದಲ್ಲಿ ಆಗಿರುತ್ತದೆ ಎಂದು ನನಗೆ ನೆನಪಿರುವುದಿಲ್ಲ. ದಾವಾ ಆಸ್ತಿಯಲ್ಲಿ ಕಟ್ಟಿರುವ ಆರ್.ಆರ್.ಸಿ ಕಟ್ಟಡ ಯಾವ ವರ್ಷದಲ್ಲಿ ಕಟ್ಟಲಾಗಿರುತ್ತದೆ

ಎನ್ನುವುದು ನನಗೆ ನೆನಪಿರುವುದಿಲ್ಲ. ಸದರಿ ಕಟ್ಟಡವನ್ನು ಕಟ್ಟಲು ಸಂಬಂಧಿಸಿದ ಕಚೇರಿಯಿಂದ ಪರವಾನಿಗೆಯನ್ನು ಪಡೆದುಕೊಂಡಿರುತ್ತೇವೆ. ಸದರಿ ಪರವಾನಿಗೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ನಾನು ನನ್ನ ವಾದ ಪತ್ರದ 3 ನೇ ಖಂಡಿಕೆಯಲ್ಲಿ ಮದ್ಯಂತರ ಮಂಡಲ ಪಂಚಾಯತಿರವರಿಂದ ಕಂಪೌಡ ಗೋಡೆಯನ್ನು ಕಟ್ಟಲು ಅರ್ಜಿಯನ್ನು ನೀಡಿದ್ದು, ಸದರಿ ಅರ್ಜಿಯ ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಅದೇ ರೀತಿ ಸದರಿ ಪಂಚಾಯತಿಯವರು ನೀಡಿರುವ ನಿಪಿ-3 ಪರವಾನಿಗೆಯ ಸಂಖ್ಯೆಯನ್ನು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ.

ನಾನು ದಾವಾ ಆಸ್ತಿಗೆ ಸಂಬಂಧಿಸಿದಂತೆ ಆಸ್ತಿ ತೆರಿಗೆ ಪಾವತಿ ರಸೀದಿಗಳನ್ನು 1996 ರಿಂದ 2003 ರವರೆಗೆ ಮಾತ್ರ ಹಾಜರುಪಡಿಸಿರುತ್ತೇನೆ ಎಂದರೆ ಸಾಕ್ಷಿಯು 2012 ರವರೆಗೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-4 ರಲ್ಲಿ ಕಂದಾಯ ಪಾವತಿ ಮಾಡಿರುವ ರಸೀದಿಯಲ್ಲಿ ಆಸ್ತಿಯ ಸಂಖ್ಯೆ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ವಾದ ಪತ್ರದಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಕಂದಾಯ ಪಾವತಿ ರಸೀದಿಯನ್ನು ಹಾಜರುಪಡಿಸಿರುತ್ತೇನೆ ಎಂದು ತಿಳಿಸಿದ್ದು, ನಿಪಿ-4 ದಾಖಲೆ ನೀರು ಸರಬರಾಜುವಿಗೆ ಸಂಬಂಧಿಸಿದಂತೆ ರಸೀದಿ ಆಗಿರುತ್ತದೆ ಎಂದರೆ ಸಾಕ್ಷಿಯು ಸದರಿ ರಸೀದಿ ನೀರು ಮತ್ತು ಕಂದಾಯಕ್ಕೆ ಸಂಬಂಧಿಸಿರುತ್ತದೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯಲ್ಲಿ ಕಟ್ಟಡವನ್ನು ಕಟ್ಟಲು ಸಂಬಂಧಿಸಿದ ಪ್ರಾಧಿಕಾರಿದಿಂದ ಯಾವುದೇ ಪರವಾನಿಗೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ-2 ಮತ್ತು 3 ದಾಖಲೆಗಳನ್ನು ನಾನು 1 ನೇ ಪ್ರತಿವಾದಿಯೊಂದಿಗೆ ಸೇರಿಕೊಂಡು ಈ ದಾವೆ ಸಲುವಾಗಿ ಕೊಟ್ಟಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. (ಈ ಹಂತದಲ್ಲಿ 2 ನೇ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಪಾಟೀ

ಸವಾಲನ್ನು ಮುಂದೂಡಲಾಯಿತು.)

ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

**ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,**

**ತಿ.ನರಸೀಪುರ.**